ಪಿ ಡಬ್ಲ್ಯೂಃ 1

ದಿನಾಂಕ 24-11-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಈ ದಾವೆ ಹೂಡುವ ಪೂರ್ವದಲ್ಲಿ ದಾವಾ ಆಸ್ತಿಯ ಬಗ್ಗೆ ಆದ ವ್ಯವಹಾರಗಳ ಬಗ್ಗೆ ಮಾಹಿತಿ ಇರುತ್ತದೆ. ದಾವಾ 1 ರಿಂದ 5 ನೇ ಆಸ್ತಿ ಮೂಲತಃ ದುರ್ಗಪ್ಪನ ಹೆಸರಿನಲ್ಲಿದ್ದು ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಆ ರೀತಿ ಯಾವುದೇ ದಾಖಲೆಗಳನ್ನು ಹಾಜರಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 11 ರ ನೊಂದಣಿಯ ಪೂರ್ವದಲ್ಲಿ ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಇನ್ನು ಮುಂದೆ ಯಾವುದೇ ಹಿಸ್ಸಾ ಬಾಕಿ ಇರುವುದಿಲ್ಲ ಎಂದು ನಮೂದಿಸಲಾಗಿದೆ ಎಂದರೆ ಸರಿ. ನಿಪಿ 11 ರ ದಾಖಲೆಯನ್ನು ನಾವು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ.

2. ವಂಶವೃಕ್ಷದಲ್ಲಿ ತೋರಿಸಿರುವಂತೆ ಹನುಮವ್ವ, ಕಾಳವ್ವ ಮತ್ತು ಚೌಡಮ್ಮನ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. 6 ನೇ ಪ್ರತಿವಾದಿ ವಯಸ್ಕನಾದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ಯಾವ ವರ್ಷಕ್ಕೆ ಸಂಬಂಧಿಸಿರುತ್ತವೆ ಎಂದು ನೆನಪಿಲ್ಲ. ಪ್ರತಿವಾದಿಗಳು ದಾವಾ ಆಸ್ತಿಗಳನ್ನು ಕಳೆದ 40 ವರ್ಷಗಳಿಂದ ಕಬ್ಜಾ ಅನುಭವಿಸುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿಗಳು ದಾವಾ ಆಸ್ತಿಯ ತೆರಿಗೆ ಪಾವತಿಸುತ್ತಿದ್ದಾರೆ ಎಂದರೆ ಸಾಕ್ಷಿಯು ನಾನು ಸಹ ಪಾವತಿಸುತ್ತಿದ್ದೇನೆ ಎಂದು ನುಡಿಯುತ್ತಾರೆ. ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ನಾಗೇನಹಳ್ಳಿಯಲ್ಲಿಯೇ ವಾಸವಾಗಿರುತ್ತೇನೆ. ಆ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

3. ದಾವಾ ಆಸ್ತಿಗಳ ಇ-ಸ್ವತ್ತು ಪ್ರತಿವಾದಿಯರ ಹೆಸರಿನಲ್ಲಿವೆ ಎಂದರೆ ಸರಿ. ನಿಪಿ 11 ರಂತೆ ಪಾಲುವಾಟ್ನಿಯನ್ನು ಯಾವ ವರ್ಷ ಮಾಡಿಕೊಂಡಿರುತ್ತೇವೆ ಎಂದು ನೆನಪಿಲ್ಲ. ದಿನಾಂಕ 16-04-2009 ರಲ್ಲಿ ಪಾಲುವಾಟ್ನಿಯಾಗಿರುತ್ತದೆ ಎಂದರೆ ಸರಿ. ಸದರಿ ಪಾಲುವಾಟ್ನಿಯ ನಂತರ ಈ ದಾವೆ ಹೂಡುವ ತನಕ ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಗುರುಹಿರಿಯರ ಸಮಕ್ಷಮ ಪಾಲುವಾಟ್ನಿ ಮಾಡಿ ಒಪ್ಪಿಕೊಂಡು ನಿಪಿ 11 ಕ್ಕೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಗುರುಹಿರಿಯರು ಸೂಚಿಸಿದಂತೆ ನಾವು ನಿಪಿ 11 ರ ಪಾಲುವಾಟ್ನಿಗೆ

ಒಪ್ಪಿಕೊಂಡಿದ್ದೆವು ಎಂದರೆ ಸಾಕ್ಷಿಯು ದಾವಾ ಆಸ್ತಿಯ ಕುರಿತು ಒಪ್ಪಿಕೊಂಡಿರಲಿಲ್ಲ ಎಂದು

ನುಡಿಯುತ್ತಾರೆ. ದಾವಾ ಆಸ್ತಿಗಳಲ್ಲಿ ಈಗಾಗಲೇ ಹಿಸ್ಸೆ ಆಗಿದ್ದರೂ ಸಹ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಕೇಳಿರುವಂತೆ ಡಿಕ್ರಿ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

4. ನಾನು ಮೊದಲು ರಾಣೇಬೆನ್ನೂರಿನ ಚಿಕನ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೆನು ಎಂದರೆ ಸರಿ. ಸದರಿ ಸ್ಥಳದಲ್ಲಿ ಪ್ರತಿವಾದಿಯರ ವಿರೋದಿಗಳಿದ್ದು ಅವರ ಮಾತು ಕೇಳಿ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.                    ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ.                    ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.

ದಿನಾಂಕ 24-11-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಮೂಲ ಊರು ಹರಿಹರ ತಾಲೂಕ ಹುಲಿಗಿನಹೊಳೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಕುರಿತು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದೊಡ್ಡಬೀಮಪ್ಪ ನಾವು ಹುಟ್ಟುವ ಪೂರ್ವದಲ್ಲಿ ಮರಣ ಹೊಂದಿದ್ದರು. ಆತನಿಗೆ ಒಟ್ಟು 4 ಜನ ಹೆಣ್ಣು ಮಕ್ಕಳು ಇರುತ್ತಾರೆ. ಅವರುಗಳೆಂದರೆ ಹನುಮವ್ವ, ಕಾಳವ್ವ, ನಾಗವ್ವ ಮತ್ತು ಚೌಡವ್ವ ಆಗಿರುತ್ತಾರೆ. ಆತನ ಮಗ ದುರ್ಗಪ್ಪ ಸುಮಾರು 8-10 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಮೂಲ ಪುರುಷನ ಮಕ್ಕಳ ಮರಣದ ಬಗ್ಗೆ ನನಗೆ ಮಾಹಿತಿ ಇರುತ್ತದೆ.

2. ದುರ್ಗಪ್ಪನಿಗೆ ಒಟ್ಟು 8 ಜನ ಮಕ್ಕಳು. ದಾವಾ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ದಾವಾ ಆಸ್ತಿಗಳು ಈಗ ದುರ್ಗಪ್ಪನ ಮಕ್ಕಳ ಹೆಸರಿನಲ್ಲಿ ಇರುತ್ತವೆ. ದಾವಾ ಆಸ್ತಿಗಳು ಮೂಲತಃ ಯಾರಿಂದ ಬಂದಿರುತ್ತವೆ ಎಂದು ನನಗೆ ಗೊತ್ತಿರುತ್ತದೆ. ಆ ಕುರಿತು ನಾನು ದಾಖಲೆಗಳನ್ನು ನೋಡಿರುತ್ತೇನೆ. ಸದರಿ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ವಾದಿ ಹಾಜರುಪಡಿಸಿರುವುದಾಗಿ ನುಡಿಯುತ್ತಾರೆ.

3. ನಿಪಿ 11 ರ ಮಾತುಕತೆಯ ಸಮಯದಲ್ಲಿ ನಾನು ಇರಲಿಲ್ಲ. ಗುರುಹಿರಿಯರ ಸಮಕ್ಷಮ ಮಾತುಕತೆಯಾಗಿ ನಂತರ ನಿಪಿ 11 ರಂತೆ ಪಾಲುವಾಟ್ನಿಯಾಗಿರುತ್ತದೆ ಎಂದರೆ ಸರಿ. ಸದರಿ ಗುರುಹಿರಿಯರ ಬಳಿ ನಾನು ನಿಪಿ 11 ರ ಬಗ್ಗೆ ವಿಚಾರಿಸಿರುವುದಿಲ್ಲ. ದಾವಾ ಆಸ್ತಿಗಳನ್ನು ಪ್ರತಿವಾದಿಗಳ ಹೆಸರಿಗೆ ಇರುವಂತೆ ನಿಪಿ 11 ರ ಪಾಲುವಾಟ್ನಿಯಲ್ಲಿ ಒಪ್ಪಿಗೆಯಾಗಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪ್ರತಿವಾದಿಗಳು ಮಾತ್ರ ಕಬ್ಜಾ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿ ದಾವಾ ಆಸ್ತಿಗಳ ಕಬ್ಜಾದಲ್ಲಿರುವ ಕುರಿತು ಹೇಳಿ ಬರೆಸಿರುತ್ತೇನೆ. ಆ ರೀತಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಲವು ರಾಜಿ ಪಂಚಾಯತಿಗಳನ್ನು ಮಾಡಿರುತ್ತೇನೆ ಎಂದರೆ ಸರಿ. ನಾನು ನಾಗೇನಹಳ್ಳಿ ಮೂಲ ವಾಸಿಯಾಗದ

ಕಾರಣ ನನಗೆ ದಾವಾ ಆಸ್ತಿಗಳ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು

ನನ್ನ ಅಜ್ಜನ ಕಾಲದಲ್ಲಿ ನಾಗೇನಹಳ್ಳಿಗೆ ಬಂದಿರುವುದಾಗಿ ನುಡಿಯುತ್ತಾರೆ. ಸಾಕ್ಷಿ ಪ್ರಮಾಣ ಪತ್ರ ಬರೆಯಲು ವಕೀಲರು ಮಾಹಿತಿಯನ್ನು ನೀಡಿರುತ್ತಾರೆ. ದಾವಾ ಆಸ್ತಿಗಳ ಕುರಿತು ನನಗೆ ವಾದಿಯರ ಪರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.